# ಸೆಲೆಬ್ರಿಟಿ

■ ಹನಿ



## 'ಪಾಪ್ ಸ್ಟಾರ್' ಜಸ್ಟಿನ್

17ರ ಹರೆಯದಲ್ಲಿ ಇನ್ನೂ ಮೀಸೆ ಮೊಳೆತಿರುವುದಿಲ್ಲ, ಜಗತ್ತು ಏನೆಂದೂ ಗೊತ್ತಿರುವುದಿಲ್ಲ. ಆದರೆ ಕೆಲವರಿರುತ್ತಾರೆ– ಅವರು 17 ಸಮೀಪಿಸುವುದಕ್ಕೆ ಮುನ್ನವೇ ವಿಶ್ವಾದ್ಯಂತ ಲಕ್ಷಾಂತರ ಅಭಿಮಾನಿಗಳನ್ನು ಗಳಿಸಿರುತ್ತಾರೆ. ಸಂಪತ್ತು, ಖ್ಯಾತಿ ಎಲ್ಲವೂ ಪದತಲದಲ್ಲಿ ಬಂದು ನಿಂತಿರುತ್ತದೆ! ಅಂತಹ ಅದೃಷ್ಟವಂತರಲ್ಲಿ ಒಬ್ಬ ಜಸ್ಟಿನ್ ಡ್ರ್ಯೂ ಬೀಬರ್. (ಬರ್ತ್‌ಡೇ 1–3–94)

2011ರ 'ನೂರು ಮಂದಿ ಜಾಗತಿಕ ಸೆಲೆಬ್ರಿಟಿ'ಗಳ ಪಟ್ಟಿ ಮಾಡಿರುವ ಫೋರ್ಬ್ಸ್ ಪತ್ರಿಕೆ, ಜಸ್ಟಿನ್ ಬೀಬರ್‌ಗೆ ಪಟ್ಟಿಯಲ್ಲಿ ಮೂರನೇ ಸ್ಥಾನ ನೀಡಿದೆ. ಇನ್ನೂ 17ರ ಹರೆಯದ ಜಸ್ಟಿನ್ ಬೀಬರ್, ಗಾಲ್ಫ್ ಮಾಂತ್ರಿಕ ಟೈಗರ್ ವುಡ್ಸ್‌ಅನ್ನೂ ಹಿಂದಿಕ್ಕಿ ಈ ಪಟ್ಟಿಯಲ್ಲಿ ಮೂರನೇ ಸ್ಥಾನ ಗಳಿಸಿರುವುದು ಅದ್ಭುತ ಸಾಧನೆಯೇ. ಮೈಕಲ್ ಜಾಕ್ಸನ್ ನಿಧನದ ಬಳಿಕ ಇವತ್ತು ಜಾಗತಿಕ ಪಾಪ್ ಸಂಗೀತದ ನಂಬರ್ ಒನ್ ತಾರೆ ಎನ್ನಿಸಿರುವ ಲೇಡಿ ಗಾಗಾ ಈ ಪಟ್ಟಿಯಲ್ಲಿ ಮೊದಲ ಸ್ಥಾನದಲ್ಲಿ ಇರುವುದನ್ನು ನೋಡಿದರೆ, ಎಳೆಯ ಜಸ್ಟಿನ್‌ನ ಸಾಧನೆಯ ಮಹತ್ವ ಗೊತ್ತಾಗುತ್ತದೆ.

2010ರಲ್ಲಿ ಜಸ್ಟಿನ್ ಹೊರತಂದ 'ಮೈ ಲೈಫ್' ಎಂಬ ಆಲ್ಬಂ ಅತ್ಯಧಿಕ ಮಾರಾಟ ಕಂಡು ಪ್ಲಾಟಿನಂ ಸ್ಥಾನಮಾನ ಪಡೆದಿದೆ. ಈತ ನಡೆಸಿದ ಸಂಗೀತ ಸಂಜೆ 'ನೆವರ್ ಸೇ ನೆವರ್' ಎಂಬ ಹೆಸರಲ್ಲಿ ಸಿನಿಮಾ ಆಗಿದ್ದು ಈಗಾಗಲೇ ಅದರ ಡಿಸ್ಕ್ ಮಾರಾಟದಿಂದ 100 ದಶಲಕ್ಷ ಡಾಲರ್ ಗಳಿಸಿದ್ದಾನೆ. ಇವತ್ತು ಅಮೆರಿಕದ ಯಾವುದೇ ಮೂಲೆಯಲ್ಲಿ ಜಸ್ಟಿನ್ ನೈಟ್ ಷೋ ನಡೆಸಿದರೆ ಒಟ್ಟು '6 ಲಕ್ಷ ಡಾಲರ್'ಗಳ ಟಿಕೆಟ್ ಮಾರಾಟ ಖಚಿತವಂತೆ! ಮೈ ಲೈಫ್ ಆಲ್ಬಂನಲ್ಲಿರುವ 'ಬೇಬಿ..' ಅಮೆರಿಕ ಮತ್ತು ಯೂರೋಪ್‌ನಲ್ಲಿ ವರ್ಷದ ಸೂಪರ್‌ಹಿಟ್ ಹಾಡು ಎನ್ನಿಸಿಕೊಂಡಿತು. ಜಸ್ಟಿನ್ 2010ರ ಅಮೆರಿಕಾ ಮ್ಯೂಸಿಕ್ ಪ್ರಶಸ್ತಿಗಳಲ್ಲಿ 'ವರ್ಷದ ಕಲಾವಿದ' ಎಂಬ ಪ್ರಶಸ್ತಿ ಗೆದ್ದುಕೊಂಡ. ಈತನ ಕೆಲವು ಹಾಡುಗಳು ಗ್ರಾಮ್ಮಿ ಪ್ರಶಸ್ತಿಗೂ ನಾಮಕರಣಗೊಂಡವು. ಬೇಬಿ.. ಹಾಡು ಯೂ ಟ್ಯೂಬ್‌ನಲ್ಲಿ 2010ರಲ್ಲಿ ಅತ್ಯಧಿಕ ಜನ ವೀಕ್ಷಿಸಿದ ಹಾಡು ಎಂಬ ಖ್ಯಾತಿಗೂ ಪಾತ್ರವಾಗಿದೆ. 2009ರಲ್ಲಿಯೇ 'ಒನ್ ಟೈಮ್' ಎಂಬ ಆಲ್ಬಂ ಬಿಡುಗಡೆಯಾದಾಗ ಕೆನಡಾ ಟಾಪ್ ಟೆನ್ ಕಲಾವಿದರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದನೀತ. ಈತನ ಚೊಚ್ಚಲ ಆಲ್ಬಂನ ಏಳು ಹಾಡುಗಳು 'ಬಿಲ್‌ಬೋರ್ಡ್ ಹಾಟ್ 100'ನಲ್ಲಿ ಸ್ಥಾನ ಪಡೆದದ್ದೂ ವಿಶೇಷವೇ.

ಈಗ ಹೊಸ ಪೀಳಿಗೆಯ ತಾರೆಯರು ಉದಿಸಲು ಹೆಚ್ಚು ಸಮಯ ಬೇಕಾಗುವುದಿಲ್ಲ. ಯಾಕೆಂದರೆ ಪ್ರತಿಭಾವಂತರನ್ನು ಮುಲಾಜಿಲ್ಲದೆ ಗುರುತಿಸುವ ವ್ಯವಸ್ಥೆಯೇ ಹಾಗೆ ಬೆಳೆದುಬಂದಿದೆ. ಗಂಡ ಬಿಟ್ಟಿದ್ದ ತಾಯಿ ಈತನನ್ನು ಕಷ್ಟಪಟ್ಟು ಸಾಕಿದಳು. ಚಿಕ್ಕಂದಿನಿಂದಲೇ ಹಾಡಿಕೊಂಡು, ಗೀತೆ ರಚನೆ ಮಾಡಿಕೊಂಡು, ಸಣ್ಣಪುಟ್ಟ ಪಾತ್ರಗಳಲ್ಲಿ ನಟಿಸುತ್ತಿದ್ದ ಈತನ ಹೆಸರು 2008ರವರೆಗೆ ಹೆಚ್ಚಾಗಿ ಯಾರಿಗೂ ಗೊತ್ತಿರಲಿಲ್ಲ. ಒಂದು ದಿನ ಈತ ತಾನೇ ರಚಿಸಿ, ಹಾಡಿದ ಹಾಡುಗಳನ್ನು ಅಂತರ್ಜಾಲದ 'ಯೂ ಟ್ಯೂಬ್'ನಲ್ಲಿ ಹಾಕಿದ. ಅದನ್ನು ನೋಡಿದ ಸ್ಕೂಟರ್ ಬ್ರೌನ್ ಎಂಬಾತ ಈತನ ಪ್ರತಿಭೆಯನ್ನು ಗುರುತಿಸಿ, ಮ್ಯಾನೇಜರ್ ಆಗಲು ಮುಂದೆ ಬಂದ. ಬ್ರೌನ್‌ನ ಸಾರ್ವಜನಿಕ ಸಂಪರ್ಕ ಕೆಲಸ ಮಾಡಿತು. ಒಂದೇ ವರ್ಷದಲ್ಲಿ ಜಸ್ಟಿನ್ ತಾರೆಯಾದ! ಈಗ 17ರ ಹರೆಯದಲ್ಲೇ ಈತ ಇತಿಹಾಸ ಸೃಷ್ಟಿಸಿದ್ದಾನೆ.

## ಇನ್ನೊಬ್ಬ ದೀಪಿಕಾ!

ದೀಪಿಕಾ ಎಂಬ ಹೆಸರಿನ ನಟಿಯೊಬ್ಬಳು ಹಿಂದೆ ಟೀವಿ ರಾಮಾಯಣದಲ್ಲಿ ಸೀತೆಯ ಪಾತ್ರ ಮಾಡಿ ಮನೆಮಾತಾಗಿದ್ದಳು. ಆ ಬಳಿಕ ಬಾಲಿವುಡ್‌ನಲ್ಲಿ ಪ್ರಚಾರಕ್ಕೆ ಬಂದವಳು ದೀಪಿಕಾ ಪಡುಕೋಣೆ. ಇವರಲ್ಲದೆ ಇನ್ನೊಬ್ಬ ದೀಪಿಕಾ ನಮ್ಮಲ್ಲಿ ಬಹಳಷ್ಟು ಜನರಿಗೆ ಗೊತ್ತಿಲ್ಲ. ಆದರೆ ಈಗ ಬಂದಿರುವ ಈ ಮೂರನೇ ದೀಪಿಕಾ, ಮುಂದಿನ ವರ್ಷದ ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಪದಕ ತಂದುಕೊಡುವ ನಿರೀಕ್ಷೆ ಹುಟ್ಟಿಸಿರುವವಳು. ಈಕೆಯ ಹೆಸರು ದೀಪಿಕಾ ಕುಮಾರಿ ಯಾನೆ ದೀಪಿಕಾ ಪ್ರಜಾಪತಿ. (ಬರ್ತ್‌ಡೇ: 13–6–1994)

ರಾಂಚಿಯಿಂದ ಬಂದು ಈಗಾಗಲೆ ಕ್ರಿಕೆಟ್‌ನಲ್ಲಿ ಹೊಸ ದಾಖಲೆಗಳನ್ನು ಬರೆದಿರುವ ಭಾರತ ತಂಡದ ನಾಯಕ ಮಹೇಂದ್ರ ಸಿಂಗ್ ಧೋನಿ ಎಲ್ಲರಿಗೂ ಗೊತ್ತು. ಈಕೆಯೂ ರಾಂಚಿಯ ಹುಡುಗಿ. ಇನ್ನೂ 17ರ ಈ ಬಾಲೆ ಕೆಎಂಸಿಟಿ ಕಾಲೇಜಲ್ಲಿ ಮೊದಲ ಪಿಯು ಓದುತ್ತಿದ್ದಾಳೆ. 2010ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಬಿಲ್ಲುಗಾರಿಕೆ ಸ್ಪರ್ಧೆಯಲ್ಲಿ ವೈಯಕ್ತಿಕ ಚಿನ್ನ ಮತ್ತು ತಂಡದಲ್ಲಿ ಚಿನ್ನ ಗೆದ್ದು ಡಬಲ್ಸ್ ಸಾಧಿಸಿದ ಬಳಿಕ ಈಕೆ ಈಗ ಭಾರತದ ಭರವಸೆಯ ಕ್ರೀಡಾಪಟು.

ಚಿಕ್ಕಂದಿನಿಂದಲೇ ದೀಪಿಕಾಗೆ ಗುರಿ ಇಡುವುದರಲ್ಲಿ ವಿಶೇಷ ಆಸಕ್ತಿ ಇತ್ತು. ಮಾವಿನಮರಕ್ಕೆ ಗುರಿಯಿಟ್ಟು ಕಲ್ಲು ಹೊಡೆದು ಹಣ್ಣು ಬೀಳಿಸುವುದರಲ್ಲಿ ಈಕೆಯದ್ದು ಎತ್ತಿದ ಕೈಯಂತೆ! ಬಿಲ್ಲುಗಾರಿಕೆಯ ಕ್ರೀಡೆಗೆ ಸೇರಬೇಕೆಂಬ ಆಸೆ ಇದ್ದರೂ ಚಿಕ್ಕಂದಿನಲ್ಲಿ ಬಡತನ ಬಿಡಲಿಲ್ಲ. ಮನೆಯಲ್ಲೇ ಬಿದಿರಿನಿಂದ ಮಾಡಿದ ಬಿಲ್ಲು, ಬಾಣ ಹಿಡಿದು ಅಭ್ಯಾಸ ಮಾಡುತ್ತಿದ್ದಳೀಕೆ. ತಾಯಿ ನರ್ಸ್; ತಂದೆ ಆಟೋ ಚಾಲಕ. ಮಗಳ ಬಿಲ್ಲುಗಾರಿಕೆಯ ವಿದ್ಯೆಗೆ ಪ್ರೋತ್ಸಾಹ ಕೊಡಲು ಬಡ ತಂದೆ ಸಿದ್ಧನಿರಲಿಲ್ಲ. ಈಕೆಯ 'ಕಸಿನ್' ಆಗಿರುವ ವಿದ್ಯಾಕುಮಾರಿ ಅದಾಗಲೇ ಟಾಟಾ ಆರ್ಚರಿ ಅಕಾಡೆಮಿಯಲ್ಲಿ ತರಬೇತಿ ಪಡೆಯುತ್ತಿದ್ದವಳು, ಈಕೆಯ ಉತ್ಸಾಹ ನೋಡಿ ನೆರವಾದಳು. ಹಾಗಾಗಿ 2005ರಲ್ಲಿ ಅರ್ಜುನ್ ಆರ್ಚರಿ ಅಕಾಡೆಮಿಗೆ ದೀಪಿಕಾಗೆ ಪ್ರವೇಶ ಸಿಕ್ಕಿತು.

ಒಂದೇ ವರ್ಷದಲ್ಲಿ ವೃತ್ತಿಪರ ಕ್ಷೇತ್ರ ಪ್ರವೇಶಿಸಿದ ದೀಪಿಕಾ, 2006ರಲ್ಲಿ ಟಾಟಾ ಆರ್ಚರಿ ಅಕಾಡೆಮಿ ಸೇರಿದಳು. ಅಲ್ಲಿ ತಿಂಗಳಿಗೆ 500 ರೂಪಾಯಿ ಶಿಷ್ಯವೇತನ ಕೂಡಾ ದೊರಕಿತು. ನಿಷ್ಠೆಯಿಂದ ತರಬೇತಿ ಪಡೆದಳು. 15ರ ಹರೆಯದಲ್ಲಿಯೇ ಅಮೆರಿಕದಲ್ಲಿ ನಡೆದ 11ನೇ ಯುವ ಆರ್ಚರಿ ಚಾಂಪಿಯನ್‌ಶಿಪ್‌ನಲ್ಲಿ ಪ್ರಶಸ್ತಿ ಗೆದ್ದಳು. ಟಾಟಾ ಅಕಾಡೆಮಿಯ ತರಬೇತಿಯಲ್ಲಿ ಈಕೆಯ ನಿಷ್ಠೆ ಹೇಗಿತ್ತೆಂದರೆ, ಮೂರು ವರ್ಷಗಳಿಂದ ಆಕೆಗೆ ತನ್ನ ಮನೆಗೆ ಹೋಗಲೇ ಇಲ್ಲ! ಕಳೆದ ವರ್ಷ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಎರಡು ಚಿನ್ನದ ಪದಕಗಳನ್ನು ಗೆದ್ದ ಬಳಿಕ ಮೊದಲ ಬಾರಿಗೆ ಮನೆಗೆ ತೆರಳಿದಳು! 2011ರ ಕೊನೆಯಲ್ಲಿ ಚೀನಾದಲ್ಲಿ ನಡೆದ ಅಂತರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ಅತ್ಯಲ್ಪ ಅಂತರದಲ್ಲಿ ಕಂಚು ಈಕೆಯ ಕೈತಪ್ಪಿದೆ. ಆದರೆ ಅಲ್ಲಿಯ ಸಾಧನೆಯ ಮಟ್ಟ ಉತ್ಸಾಹ ತುಂಬುವಂತಿದೆ. ಈಗ ಲಂಡನ್ ಒಲಿಂಪಿಕ್ಸ್‌ನ ಕನಸು ಕಣ್ಣ ಮುಂದಿದೆ. ಆರ್ಚರಿ ಕ್ರೀಡೆಯನ್ನು ಬಲ್ಲವರ ಪ್ರಕಾರ, ಈಕೆ ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲಬಲ್ಲಷ್ಟು ಪ್ರತಿಭಾವಂತೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65